# ಶುದ್ಧ ಜಲ, ನೆಲ, ಗಾಳಿಯ ಸಂರಕ್ಷಣೆ: ನಮ್ಮೆಲ್ಲರ ಹೊಣೆ




**ಬೆಂಗಳೂರು, ಅ.2:** ಸ್ವಚ್ಛ ಭಾರತ ಮಿಷನ್- ಅರ್ಬನ್ ಮತ್ತು ಅಮೃತ್ 2.0 ಹಾಗೂ ಗಾಂಧಿ ಜಯಂತಿ ಕಾರ್ಯಕ್ರಮದ ಅಡಿಯಲ್ಲಿ ದಿ ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜಿನ ಎನ್.ಎಸ್.ಎಸ್ ಘಟಕದ ವತಿಯಿಂದ ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ ಆವರಣ, ಮಿಸಲು ಆರಣ್ಯ ಪ್ರದೇಶದಲ್ಲಿ 250 ಗಿಡಗಳನ್ನು ನೆಡುವ ಅಭಿಯಾನ ಕಾರ್ಯಕ್ರಮ ವನ್ನು ಕೈಗೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ನಮುಮ ನಗರವನ್ನು ಶುದಧ ಜಲ, ನೆಲ, ಗಳಿ–ಸಂರಕ್ಷಿತ ಮತ್ತು ನಿರ್ವಹಣೆ ಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿ ಕಸ ಮುಕ್ತ ನಗರವನ್ನಾಗಿಸುವ ಸಂಕಲ್ಪವನ್ನು ಕೈಗೊಳ್ಳಲಾಯಿತು. ಘಟಕದ ಕಾರ್ಯ ಕ್ರಮಾಧಿಕಾರಿಗಳಾದ ಮರಿಸ್ವಾಮಿ ಎನ್. ರವರು ಸ್ವಯಂ ಸೇವಕರನ್ನು ಕುರಿತು ಮಾತನಾಡುತ್ತ, ಪ್ರತಿಯೊಬ್ಬರು ದೇಶದ ಮಹತ್ವಕಾಂಕ್ಷಿ ಮತ್ತು ಮಾತೃ ಭೂಮಿಯ ಮೇಲ್ಲಿನ ಪ್ರೀತಿಯನ್ನು ಹೊಂದಿ ಧ್ಯೇಯ, ಗೌರವ, ಘನತೆಯನ್ನು ಹೆಚ್ಚಿಸಿಕೊಳ್ಳಲು ಕರೆ ನೀಡಿದರು. ಸುಮಾರು 50 ಕ್ಕೂ ಹೆಚ್ಚಿ ಸ್ವಯಂ ಸೇವಕರು ಭಾಗಿಯಾಗಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.